# "ಶ್ರೀ ಸತ್ಯಭೋದತೀರ್ಥರು (ಸವಣೂರು)"





# "ಶ್ರೀ ಸತ್ಯಭೋದತೀರ್ಥರು (ಸವಣೂರು)"

**ನೈವೇದ್ಯಗವಿಷಂ ರಾಮೇ ವೀಕ್ಷ್ಯ ತದ್ಭುಕ್ತಿಭಾಗ್ ಗುರು: ।**

**ಯೋऽದರ್ಶಯದ್ರವಿಂ ರಾತ್ರೌ ಸತ್ಯಭೋಧೋऽಸ್ತು ಮೇ ಮುದೇ ॥**

**ನೈವೇದ್ಯದಲ್ಲಿನ ವಿಷವನ್ನು ರಾಮನಲ್ಲಿ ಕಂಡು ಅದನ್ನು ಸೇವಿಸಿದ, ರಾತ್ರಿಯಲ್ಲಿ ಸೂರ್ಯನ ದರ್ಶನವನ್ನು ಮಾಡಿಸಿದ ಸತ್ಯಬೋಧತೀರ್ಥರು ನಮಗೆ ಸಂತೋಷವನ್ನುಂಟು ಮಾಡಲಿ.**

**(ಆ ರಾ ಧ ನೆ : ಫಾ ಲ್ಗು ಣ ಕೃ ಷ್ಣ ಪ ಕ್ಷ ಪ್ರ ತಿ ಪ ದ )**

ಜನನ – **1710**

ಸನ್ಯಾಸಾಶ್ರಮ ಸ್ವೀಕಾರ – **1743**

ಆಶ್ರಮಗುರುಗಳು – ಶ್ರೀ ಸತ್ಯಪ್ರಿಯ ತೀರ್ಥರು

ಆಶ್ರಮ ಶಿಷ್ಯರು – ಶ್ರೀ ಸತ್ಯಸಂಧರು

ವೃಂದಾವನ ಪ್ರವೇಶ – **1783,** ಸವಣೂರು

ಆರಾಧನೆ – ಫಾಲ್ಗುಣ ಕೃಷ್ಣ ಪಾಡ್ಯ

ಪೂರ್ವಾಶ್ರಮ ನಾಮ – ಪಾಂಡುರಂಗಿ ರಾಮಾಚಾರ್ಯ

ಜನ್ಮಸ್ಥಳ – ರಾಯಚೂರು

ಅಂಶ – ಮಾರ್ಕಂಡೇಯ

ಸಮಕಾಲೀನರು – ಶ್ರೀಧೀರೇಂದ್ರತೀರ್ಥರು, ಶ್ರೀ ಜಗನ್ನಾಥದಾಸರು, ಶ್ರೀ ಮಾದನೂರು ವಿಷ್ಣುತೀರ್ಥರು, ವಿಜಯದಾಸರು, ಗೋಪಾಲದಾಸರು

**ರಾ ಗ – ಪಂ ತು ವ ರಾ ಳಿ : ತಾ ಳ – ಅ ಟ ತಾ ಳ**

ನಾ ಧನ್ಯನಾದೆನಿಂದು ಸತ್ಯ
ಬೋಧರಾಯರ ದಿವ್ಯಪಾದಕಮಲವ ಕಂಡು ।ಪ।
ಹಿಂಗಿದುವಖಿಲದೋಷಂಗಳು ಈ ಮುನಿಪುಂಗವರಂಘ್ರಿಸಂದರುಶನದಿ
ಗಂಗಾದಿ ತೀರ್ಥ ಭುಜಂಗಾದ್ರಿ ಮೊದಲಾದತುಂಗಯಾತ್ರೆ ಫಲ ಸಮನೆನಿಸಿತು ।೧।
ದಾವಮುನಿಗಳೊ ದಾವ ದೇವತೆಗಳೊದಾವರುಬಲ್ಲರು ಅವರಗತಿ
ಸೇವಿಪಜನರ ಕೃಪಾವಲೋಕನದಿಂದ ಪಾವನಮಾಡುವ ಕೋವಿದಾರ್ಯರ ಕಂಡು ।೨।
ಸೀತಾರಮಣ ಜಗನ್ನಾಥವಿಟ್ಠಲರೇಯ ಭೂತಳದೊಳು ಈ ಮಹಾತ್ಮರನು
ಪ್ರೀತಿಯಿಂದಲಿ ತಾ ಸೃಜಿಸಿದ ಜಗದಿ ಪುನೀತರ ಮಾಡಲು ತಾ ತಕ್ಷಣದಿ ।೩।

**ವಿಶೇಷ –**

**1. ತಮ್ಮ ಶಿಷ್ಯರಿಗೆ ಒಮ್ಮೆ ರಾತ್ರಿಯಲ್ಲಿ ಸೂರ್ಯನ ದರ್ಶನ. Once he showed his shishyas Surya during midnight.**




(Photo by Vaidya Srinivasachar)

2. ಒಮ್ಮೆ ಶ್ರೀಸತ್ಯಭೋಧತೀರ್ಥರ ನೈವೇದ್ಯದ "ಪರಮಾನ್ನ" ಆಹಾರದಲ್ಲಿ ವಿಷವನ್ನು ನೀಡಿದರು. ತಮ್ಮ ಮಹಾಮಂಗಳಾರತಿ ಸಮಯದಲ್ಲಿ ಶ್ರೀರಾಮನ ಮುಖ ಕಪ್ಪಾದುದನ್ನು ಗಮನಿಸಿದರೂ, ತಮ್ಮ ಶಿಷ್ಯರು ಎಷ್ಟೇ ಹೇಳಿದರೂ ಕೇಳದೆ, ವಿಷ ಮಿಶ್ರಿತ ಆಹಾರವನ್ನು ಸೇವಿಸಿದರು. ಆದರೆ ಶ್ರೀರಾಮನ ದಯದಿಂದ ಅವರಿಗೇನೂ ಆಗಲಿಲ್ಲ. ಆದ್ದರಿಂದಲೇ ಅವರ ಚರಮಶ್ಲೋಕದಲ್ಲಿ **"ನೈವೇದ್ಯಗವಿಷಂ"** ಎಂದಿರುವುದು.

   Once his shishyaas mixed poison in the paramanna which was kept for naivedya. During Mangalarathi, he observed that the idol of Sri Ramachandra turned black. Inspite of his shishyaas compelling not to take the prasada, he took the same poison mixed food, which was kept for naivedya. But the paramanugraha of Sriramachandra ensured nothing on him. That is why in the Charamashloka it is said "naivedyagaviSham".

3. Anugraha to a muslim nawaab - Once a Nawaab, named Bhairam Khan of Savanoor, built an house for him. But a snake was preventing to enter the house. So, Bhairamkhan approached Sri Satyabodharu, who did the pooja of Sriramachandra devaru for three days in that house. On the third day, the snake came in the

disguise of a Brahmin and told about the wealth in that house and instructed the Nawaab to retain only 1/4th portion and to and to handover the remaining 3/4th portion to Sreemutt and disappeared. The nawaab did so and all his problems were solved.

ಭೈರಾವ್ ಖಾನ್ ಎಂಬ ಸವಣೂರಿನ ನವಾಬ ಒಂದು ಹೊಸ ಮನೆಯನ್ನು ಕಟ್ಟಿದಾಗ, ಅವನು ಮನೆಯ ಒಳಗೆ ಹೋಗದಂತೆ ಹಾವು ಅವನನ್ನು ಕಾಡುತ್ತಿತ್ತು. ಅವನು ಸತ್ಯಭೋಧರಲ್ಲಿ ಪ್ರಾರ್ಥಿಸಿದಾಗ, ಶ್ರೀಗುರುಗಳು ಆ ಹೊಸ ಮನೆಯಲ್ಲಿ 3 ದಿನ ಶ್ರೀರಾಮಚಂದ್ರನ ಪೂಜೆ ನೆರವೇರಿಸಿದಾಗ, 3ನೇ ದಿನ ಆ ಹಾವು ಒಬ್ಬ ಬ್ರಾಹ್ಮಣ ಮೂಲಕ ಆ ಮನೆಯಲ್ಲಿರುವ ನಿಧಿಯ ಬಗ್ಗೆ ಹೇಳಿ, ಅದರಲ್ಲಿರುವ ನಿಧಿಯಲ್ಲಿ ಕಾಲುಭಾಗ ಮಾತ್ರ ಭೈರಾವಖಾನ್ ಇಟ್ಟುಕೊಂಡು ಉಳಿದುದನ್ನು ಶ್ರೀಮಠಕ್ಕೂ, ಬ್ರಾಹ್ಮಣರಿಗೂ ಕೊಡುವಂತೆ ಹೇಳಿ ಹೊರಟಿತು. ಅದರಂತೆ ಆ ನವಾಬನು ಮಾಡಲಾಗಿ ಅವನ ಕಷ್ಟ ಪರಿಹಾರವಾಯಿತು.

4. ಶ್ರೀ ಸತ್ಯಭೋಧರ ಬಗ್ಗೆ ಕಂಚೀಆಚಾರ್ಯರು 21 ಸರ್ಗಗಳ “ಶ್ರೀ ಸತ್ಯಭೋಧವಿಜಯ” ಕಾವ್ಯವನ್ನು ರಚಿಸಿದ್ದಾರೆ. Sri Kanchi Acharya has written a novel titled “Sri Satyabodha Vijaya”, which has 21 sargaas.

5. ಸತ್ಯಭೋಧ ತೀರ್ಥರು 4 ಜನ ಶಿಷ್ಯರು ಉತ್ತರಾಧಿಮಠದ ಪರಂಪರೆಯಲ್ಲಿ ಯತಿಗಳಾಗಿದ್ದರು. ಅವರುಗಳೆಂದರೆ ಶ್ರೀಸತ್ಯಸಂಧರು, ಶ್ರೀಸತ್ಯವರರು, ಶ್ರೀಸತ್ಯಧರ್ಮರು, ಶ್ರೀ ಸತ್ಯಸಂಕಲ್ಪರು. Four shishyaas of Sri Satyabodha Tirtharu had the distinction of having the peetadhipathitva of Uttaradimutt parampare, viz., Sri Satyasandharu, Sri Satyavara Tirtharu, Sri Satyadharma Tirtharu and Sri Satyasankalpa Tirtharu.

6. ಶ್ರೀಸತ್ಯಭೋದರ ಆಶ್ರಮ ಶಿಷ್ಯರಾದ ಶ್ರೀಸತ್ಯಸಂಧರಿಗೆ ಅಲ್ಪಾಯುಷ್ಯವೆಂದು ತಮ್ಮ ಜ್ಞಾನದೃಷ್ಟಿಯಿಂದ ತಿಳಿದ ಶ್ರೀಗಳು ಅವರಿಗೆ ಅನುಗ್ರಹ ಮಾಡಿ 10 ವರ್ಷ ಆಯುಸ್ಸು ಹೆಚ್ಚಾಗುವಂತೆ ಮಾಡಿದರು. Sri Satyabodharu learnt through his jnaana drusti, that one of his shishya Sri Satyasandha Tirtharu had short life and did the anugraha to him by increasing his age by 10 years.

**(source – Uttaradimutt)**